ಇ) ಸರ್ಕಾರದ ನಿಯಮದಂತೆ ಇರಬೇಕಾದ ವಿಜ್ಞಾನ ವಿಭಾಗ ಹಾಗೂ ಪ್ರಯೋಗ ಶಾಲೆಯ ವ್ಯವಸ್ಥೆ ಇದೆಯೇ; ಇತ್ತೀಚೆಗೆ ಸಿ.ಸಿ.ಐ.ಎಂ. ಇವರು ಸ್ಥಳ ತನಿಖೆ ಮಾಡಿ ವರದಿ ಕಳಿಸಲಾಗಿದೆಯೇ;

ಈ) ದಿನಾಂಕ: 03-01-2003ರಂದು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವು ಅನಿರೀಕ್ಷಿತ ತಪಾಸಣೆ ಮಾಡಿರುತ್ತಾರೆಂದು ತಿಳಿದು ಬಂದಿರುತ್ತದೆ; ಅದರ ವಿವರವನ್ನು ತಿಳಿಸಲಾಗುವುದೇ?

ಡಾ।। ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) 2001-02ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಪ್ರಥಮ ವರ್ಷದ ಬಿ.ಎ.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶ ಸಂಖ್ಯೆ: 60ಕ್ಕೆ ನಿಗದಿಪಡಿಸಿದೆ. 2002-03ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ:60.

ಆ) ಆಯುರ್ವೇದ ಕಾಲೇಜುಗಳಿಗೆ ಸಿ.ಸಿ.ಐ.ಎಂ., ನವದೆಹಲಿಯವರು ನಿಗದಿಪಡಿಸಿರುವ ಪ್ರಮಾಣದಲ್ಲಿ ಬೋಧಕ ಸಿಬ್ಬಂದಿ ಇರುವುದಿಲ್ಲ. ಕಾಲೇಜಿಗೆ ಹೊಂದಿಕೊಂಡಿರುವ ಆಸ್ಪತ್ರೆಯಲ್ಲಿ ವಿದ್ಯಾರ್ಥಿಗಳ ವಿಧ್ಯಾಭ್ಯಾಸಕ್ಕಾಗಿ ಸಿ.ಸಿ.ಐ.ಎಂ., ನವದೆಹಲಿ ಮತಿಯಿಂದ ನಿಗದಿಪಡಿಸಿರುವ ಪ್ರಮಾಣದಲ್ಲಿ ಆಸ್ಪತ್ರೆ ಸೌಲಭ್ಯ ಇರುವುದಿಲ್ಲ.

ಇ) ಸಿ.ಸಿ.ಐ.ಎಂ., ನಿಗದಿಪಡಿಸಿರುವ ಪ್ರಮಾಣದಲ್ಲಿ ವಿಜ್ಞಾನ ವಿಭಾಗ ಮತ್ತು ಪ್ರಯೋಗ ಶಾಲಾ ವ್ಯವಸ್ಥೆ ಇರುವುದಿಲ್ಲ. ಈ ಬಗ್ಗೆ ಸಿ.ಸಿ.ಐ.ಎಂ., ದಿನಾಂಕ:6-5-2002 ರಂದು ಸದರಿ ಸಂಸ್ಥೆಯನ್ನು ತನಿಖೆ ಮಾಡಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರದಿ ನೀಡಿರುತ್ತಾರೆ.

ಈ) ಹೌದು, ವರದಿಯಲ್ಲಿನ ಪ್ರಮುಖ ಅಂಶಗಳೆಂದರೆ,

1) ಬೋಧಕ ಸಿಬ್ಬಂದಿ ಕೊರತೆಯಿದೆ.

2) ವಿಭಾಗವಾರು ಲೈಬ್ರರಿ ಇರುವುದಿಲ್ಲ. ಕೇಂದ್ರಿಯ ಲೈಬ್ರರಿಗೆ ಹೊಸ ಪುಸ್ತಕಗಳನ್ನು ಖರೀದಿಸಿಲ್ಲ.

3) ವಸತಿ ಸೌಕರ್ಯದ ಕೊರತೆ ಇದೆ.

4) ಪ್ರಯೋಗಾಲಯ ಸಮಂಜಸವಿಲ್ಲ.

ರಾಜ್ಯದಲ್ಲಿ 'ನಮ್ಮ ಹೊಲ ನಮ್ಮ ರಸ್ತೆ' ಯೋಜನೆ

2060(2181) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನಮ್ಮ ಹೊಲ "ನಮ್ಮ ರಸ್ತೆ" ಯೋಜನೆಯನ್ನು ಕೈಗೊಳ್ಳಲಾಗಿದೆಯೇ;

ಆ) ಹಾಗಿದ್ದರೆ, ಈ ಯೋಜನೆಯಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಗೌರಿಬಿದನೂರು ತಾಲ್ಲೂಕಿನಾದ್ಯಂತ ಹಮ್ಮಿಕೊಂಡು ಪೂರೈಸಲಾಗಿದೆ ; ಇದಕ್ಕೆ ತಗಲಿರುವ ಅನುದಾನವೆಷ್ಟು; (ಗ್ರಾಮವಾರು ವಿವರ ಒದಗಿಸುವುದು)?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಗೌರಿಬಿದನೂರು ತಾಲ್ಲೂಕಿನಾದ್ಯಂತ ರೆವಿನ್ಯೂ ನಿವೇಶನದಲ್ಲಿ ಆಶ್ರಯ ಮನೆಗಳ ನಿರ್ಮಾಣ

2061(2182) ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ತಾಲ್ಲೂಕಿನಾದ್ಯಂತ ಆಶ್ರಯ ಯೋಜನೆಯ ವತಿಯಿಂದ ಮನೆ ನಿರ್ಮಿಸಿಕೊಳ್ಳಲು ಅನುದಾನ ಮಂಜೂರು ಮಾಡಿಸಿಕೊಂಡು ರೆವಿನ್ಯೂ ನಿವೇಶನದಲ್ಲಿ ಮನೆ ನಿರ್ಮಾಣ ಮಾಡಿಕೊಂಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರ ಒದಗಿಸುವುದು);

ಆ) ಹಾಗಿದ್ದರೆ, ರೆವಿನ್ಯೂ ನಿವೇಶನದಲ್ಲಿ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯ ಅನುದಾನವನ್ನು ಫಲಾನುಭವಿಗಳಿಗೆ ಮಂಜೂರು ಮಾಡಬಹುದೆ;

ಇ) ರೆವಿನ್ಯೂ ಗ್ರಾಮಠಾಣಾ ನಿವೇಶನ ಹೊಂದಿರುವ ಫಲಾನುಭವಿಗಳಿಗೂ ಸಹ ಆಶ್ರಯ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡಿ ಮನೆ ನಿರ್ಮಾಣ ಮಾಡಿಕೊಳ್ಳಲು ಅನುಮತಿಯನ್ನು ಒದಗಿಸಿಕೊಟ್ಟು ಈ ಭಾಗದ ನಿರ್ಗತಿಕರಿಗೆ ಮನೆ ನಿರ್ಮಿಸಿಕೊಳ್ಳಲು ಅನುಮತಿ ಒದಗಿಸಬಹುದೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

ಅ) ಗ್ರಾಮೀಣ ಪ್ರದೇಶ : ಯಾರೂ ಇಲ್ಲ

ನಗರ ಪ್ರದೇಶ : 9 ಫಲಾನುಭವಿಗಳು

ಆ) ಮತ್ತು ಇ) ಕಾನೂನು ಪ್ರಕಾರ ಪಡೆದಿರುವ ಮನೆ ನಿವೇಶನವಿರುವ ಬಡವರಿಗೆ ಆಶ್ರಯ ವಸತಿ ಯೋಜನೆಯ ನಿಯಮಗಳಡಿಯಲ್ಲಿ ಅರ್ಹರಿದ್ದಲ್ಲಿ ಮನೆ ನೀಡಬಹುದು.

ಗೌರಿಬಿದನೂರು ತಾಲ್ಲೂಕಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾರಂಭ

2062(2553) ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಗೌರಿ ಬಿದನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ 16 ಪ್ರೌಢ ಶಾಲೆಗಳು (ಸರ್ಕಾರಿ) 15 ಖಾಸಗಿ ಪ್ರೌಢ ಶಾಲೆಗಳು ಇದ್ದು, ಈ ಪ್ರೌಢ ಶಾಲೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಮುಂದಿನ ವ್ಯಾಸಂಗಕ್ಕೆ 15-18 ಕಿ.ಮೀ ದೂರಹೋಗಿ ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯವು ಇಲ್ಲದೆ ಇಲ್ಲಿನ ವಿದ್ಯಾರ್ಥಿನಿಯರು, ವಿದ್ಯಾರ್ಥಿಗಳು ಸರ್ಕಾರವನ್ನು ದೂಷಿಸುತ್ತಿರುವುದು ನಿಜವಲ್ಲವೇ;

ಇ) ಹಾಗಿದ್ದರೆ ಗೌರಿಬಿದನೂರು ತಾಲ್ಲೂಕಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಸ್ಥಾಪನೆ ಮಾಡುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ; ಇದಕ್ಕೆ ತಗಲುವ ವೆಚ್ಚವೇನು?